ಈ) ಹುಬ್ಬಳ್ಳಿ, ತಾಲ್ಲೂಕು ಬಂಡಿವಾಡ ಗ್ರಾಮದಲ್ಲಿರುವ ಔಟ್–ಪೋಲೀಸ್ ಸ್ಟೇಷನ್ ಮೇಲ್ದರ್ಜೆಗೇರಿಸುವ ವಿಚಾರ ಸರ್ಕಾರದ ಗಮನದಲ್ಲಿದೆಯೇ;

ಉ) ಹಾಗಿದ್ದಲ್ಲಿ, ಎಂದಿನಿಂದ ಮೇಲ್ದರ್ಜೆಗೆ ಸೇರಿಸಲಾಗುವುದು;

ಊ) ಕಲಘಟಗಿ ತಾಲ್ಲೂಕು ಮಿಶ್ರಕೋಟಿ ಗ್ರಾಮದಲ್ಲಿರುವ ಔಟ್–ಪೋಲೀಸ್ ಸ್ಟೇಷನ್‌ನನ್ನು ಮೇಲ್ದರ್ಜೆಗೆ ಏರಿಸಿ ಸಿಎಸ್‌ಐ ಹುದ್ದೆ ಮಂಜೂರು ಮಾಡುವ ವಿಚಾರ ಸರ್ಕಾರದ ಗಮನದಲ್ಲಿದೆಯೇ; ಹಾಗಿದ್ದಲ್ಲಿ, ಎಂದಿನಿಂದ ಮೇಲ್ದರ್ಜೆಗೆ ಏರಿಸಲಾಗುವುದು;

ಎ) ಕಲಘಟಗಿ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಇದ್ದು, ಅದನ್ನು ಸಿ.ಪಿ.ಐ. ಹುದ್ದೆಗೆ ಏರಿಸುವ ವಿಚಾರ ಸರ್ಕಾದ ಗಮನದಲ್ಲಿದೆಯೇ ? ಹಾಗಿದ್ದಲ್ಲಿ ಎಂದಿನಿಂದ ಮಾಡುವಿರಿ ? ಹಾಗೂ ಇಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು ?

ಶ್ರೀ ರಮಾನಾಥರೈ (ರಾಜ್ಯ ಗೃಹಮಂತ್ರಿಗಳು):–

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಇಲ್ಲ

ಉ) ಉದ್ಭವಿಸುವುದಿಲ್ಲ

ಊ) ಇಲ್ಲ

ಎ) ಇಲ್ಲ

1991 ರಿಂದ 93 ರವರೆಗೆ ಸಂಭವಿಸಿದ ರಸ್ತೆ ಅಪಘಾತಗಳ ಸಂಖ್ಯೆ

208 (936) ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):-

ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1991–92ಮತ್ತು 1992–93ನೇ ಸಾಲುಗಳಲ್ಲಿ ರಾಜ್ಯದಲ್ಲಿ ನಡೆದಿರುವ ಅಪಘಾತಗಳ ಸಂಖ್ಯೆ ಎಷ್ಟು;

ಆ) ಇವುಗಳಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಸಂಬಂಧಪಟ್ಟಂತೆ ಆಗಿರುವ ಅಪಘಾತಗಳ ಸಂಖ್ಯೆ ಎಷ್ಟು:–

ಇ) ಈ ಅಪಘಾತಗಳಿಂದಾಗಿ ರಾಜ್ಯ ಸರ್ಕಾರವು ಹಾಗೂ ಸಾರಿಗೆ ಸಂಸ್ಥೆಯ ಬೊಕ್ಕಸಕ್ಕೆ ಆಗಿರುವ ನಷ್ಟ ಎಷ್ಟು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ) ವರ್ಷ	ಅಪಘಾತಗಳು
1991–92	22,707
1992–93	24,167

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅಪಘಾತಕ್ಕೀಡಾದ ವಾಹನಗಳ ವರ್ಷವಾರು ವಿವರಗಳನ್ನು ಈ ಕೆಳಗೆ ಕೊಟ್ಟಿದೆ.

ವರ್ಷ	ಅಪಘಾತಗಳ ಸಂಖ್ಯೆ
1991–92	2279
1992–93	2049

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಮೇಲ್ಕಂಡ ಅಪಘಾತಗಳಲ್ಲಿ ಪರಿಹಾರ ಧನ ನೀಡಿಕೆಯ ಬಾಬ್ತಿನಿಂದಾಗಿ ಅನುಭವಿಸಿದ ನಷ್ಟದ ವಿವರ ಈ ಕೆಳಕಂಡಂತಿದೆ:

ವರ್ಷ	ಪರಿಹಾರ ನೀಡಿಕೆಯ ಮೊತ್ತ (ಲಕ್ಷ ರೂ.ಗಳಲ್ಲಿ)
1991–92	581.05
1992–93	352.06

(ಏಪ್ರಿಲ್ 92ರಿಂದ ಆಕ್ಟೋಬರ್ 92ರವರೆಗೆ)

ಬಸವಕಲ್ಯಾಣದಲ್ಲಿ ಗ್ರಾಮಾಂತರ ಪೋಲೀಸ್ ಠಾಣೆ

242 (480) ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):-

ರಾಜ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಸವಕಲ್ಯಾಣ ತಾಲ್ಲೂಕಿಗೆ ಸೇರಿದ ಗ್ರಾಮಗಳಾದ ಗೊರಟಾ, ಮುಚ್ಚಳದ, ಕಿಟ್ಟಾ, ಧನುರಾ (ಕೆ) ಗೋಕುಳ್, ತೊಗಲೂರು, ಜಿನ್ನಾಪುರ, ಗಡಿರಾಯ ಹಳ್ಳಿ, ಖಾದ್‌ಪುರ, ಈ ಎಲ್ಲಾ ಗ್ರಾಮಗಳು ಭಾಲ್ಕಿ ತಾಲ್ಲೂಕು ಕಟಕಚುಂಚೋಳಿ ಪೊಲೀಸ್ ಠಾಣೆ ವ್ಯಾಪ್ತಿಗೆ ಸೇರಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಇದರಿಂದ ಜನರಿಗೆ ತೊಂದರೆಯಾಗುತ್ತಿರುವ ವಿಚಾರ ತಿಳಿದಿದೆಯೇ;

ಇ) ಹಾಗಿದ್ದಲ್ಲಿ, ಈ ಎಲ್ಲಾ ಗ್ರಾಮಗಳನ್ನು ಭಾಲ್ಕಿ ತಾಲ್ಲೂಕು ಕಟಕಚುಂಚೋಳಿ ಪೊಲೀಸ್ ಠಾಣೆ ವ್ಯಾಪ್ತಿಯಿಂದ ಬೇರ್ಪಡಿಸಿ ಬಸವಕಲ್ಯಾಣ ಪೊಲೀಸ್ ಠಾಣೆ ವ್ಯಾಪ್ತಿಗೆ ಸೇರಿಸುವ ವಿಚಾರ ಸರ್ಕಾರದ ಗಮನದಲ್ಲಿದೆಯೇ;

ಈ) ಹಾಗಿದ್ದಲ್ಲಿ ಎಂದಿನಿಂದ ಸೇರ್ಪಡಿಸಲಾಗುವುದು;

ಉ) ಇಲ್ಲದಿದ್ದಲ್ಲಿ, ಅದಕ್ಕೆ ಕಾರಣವೇನು;

ಊ) ಬಸವಕಲ್ಯಾಣದಲ್ಲಿದ್ದಂತಹ ಪೊಲೀಸ್ ಠಾಣೆ ವ್ಯಾಪ್ತಿಯಿಂದ ಕಾನೂನನ್ನು ಸುವ್ಯವಸ್ಥೆ ಕಾಪಾಡುವಲ್ಲಿ ವಿಫಲವಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;